ಶ್ರೀ ಎಚ್.ಎಸ್. ಮಹದೇವ್ ಪ್ರಸಾದ್: ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಮಹದೇವ್‌ರವರು ಪ್ರಭಾವಶಾಲಿ ಮಂತ್ರಿಯಾಗಿರುವುದರಿಂದ, ಅಲ್ಲಿ ಸತ್ತಿರತಕ್ಕಂಥ ವ್ಯಕ್ತಿಯ ಕುಟುಂಬಕ್ಕೆ ಕನಿಷ್ಟ ಒಂದು ಲಕ್ಷ ರೂಪಾಯಿಗಳಷ್ಟು ಪರಿಹಾರವನ್ನು ಒದಗಿಸಿಕೊಡುವಂಥ ವ್ಯವಸ್ಥೆ ಮಾಡಬೇಕು.

ಶ್ರೀ ಎಂ. ಮಹದೇವ್(ರೇಷ್ಮೆ ಸಚಿವರು): ಮಾನ್ಯ ಅಧ್ಯಕ್ಷರೆ, ಈ ರೀತಿಯಾದ ಘಟನೆಯಲ್ಲಿ ಒಬ್ಬ ವ್ಯಕ್ತಿ ಸತ್ತರೆ ನಿಯಮಾನುಸಾರ ಎಷ್ಟು ಕೊಡಬೇಕಾಗುತ್ತದೆಯೋ ಅಷ್ಟನ್ನು ಖಂಡಿತಕೊಡತಕ್ಕಂಥ ವ್ಯವಸ್ಥೆ ಮಾಡಲಾಗುತ್ತದೆ.

ಶ್ರೀ ಎಚ್.ಎಸ್. ಮಹದೇವ್ ಪ್ರಸಾದ್: ಬೇರೆ ಸಂದರ್ಭದಲ್ಲಿ ಈ ವ್ಯಕ್ತಿ ಸತ್ತಿದ್ದರೆ ನಾವು ಇಲ್ಲಿ ಪ್ರಸ್ತಾಪ ಮಾಡುವುದಕ್ಕೆ ಹೋಗುತ್ತಿರಲಿಲ್ಲ. ಆದರೆ ಅಂಗಡಿಗಳನ್ನು ತೆರವು ಮಾಡಿಸುವಂಥ ಸಂದರ್ಭದಲ್ಲಿ ಹೃದಯಾಘಾತದಿಂದ ನಿಧನ ಹೊಂದಿದ್ದು, ಈತನ ಕುಟುಂಬವರ್ಗದವರಿಗೆ ಪರಿಹಾರ ಕೊಡಬೇಕೆಂದು ನೂರಾರು ಜನರು ಅಲ್ಲಿ ಪ್ರತಿಭಟನೆ ಮಾಡಿರುವ ದೃಷ್ಟಿಯಿಂದ ಈ ವಿಷಯವನ್ನು ಇಲ್ಲಿ ನಾವು ಪ್ರಸ್ತಾಪ ಮಾಡಿದ್ದೇವೆ.

ಶ್ರೀ ಎಂ. ಮಹದೇವ್: ಈಗ ನೂರಾರು ಜನರು ಪ್ರತಿಭಟನೆ ಮಾಡಿದರು ಎಂದು ಹೇಳುತ್ತಾರೆ, ಇನ್ನು ಸ್ವಲ್ಪ ಹೊತ್ತಿಗೆ 10 ರಿಂದ 15 ಜನ ರಲ್ಲಿ ಪ್ರತಿಭಟನೆ ಮಾಡುತ್ತಿದ್ದರೆಂದು ಹೇಳುತ್ತಾರೆ.

ಶ್ರೀ ಎಚ್.ಎಸ್. ಮಹದೇವ್ ಪ್ರಸಾದ್: ನಿಮ್ಮ ಪ್ರಭಾವದ ಮುಂದೆ ಅಲ್ಲಿ ಸಾವಿರಾರು ಜನರನ್ನು ಸೇರಿಸುವುದು ಬಹಳ ಕಷ್ಟ.

ಶ್ರೀ ಎಂ. ಮಹದೇವ್: ಮಾನ್ಯ ಅಧ್ಯಕ್ಷರೆ, ಸತ್ತಿರತಕ್ಕಂಥ ವ್ಯಕ್ತಿಯ ಮೇಲೆ ಮತ್ತು ಬಡವರ ಮೇಲೆ ನನಗೆ ಬಹಳಷ್ಟು ಕಾಳಜಿ ಇದೆ. ಆದ್ದರಿಂದ ನಿಯಮ ಬದ್ಧವಾಗಿ ಏನು ಕೊಡಬೇಕೊ ಅದನ್ನು ಖಂಡಿತವಾಗಿ ಕೊಡುತ್ತೇವೆ.

ಶ್ರೀ ಎ.ಆರ್. ಕೃಷ್ಣಮೂರ್ತಿ: ಮಾನ್ಯ ಅಧ್ಯಕ್ಷರೆ, ಕನಿಷ್ಟಪಕ್ಷ ಒಂದು ಲಕ್ಷ ರೂಪಾಯಿಗಳ ಪರಿಹಾರ ಕೊಡಿಸತಕ್ಕಂಥ ವ್ಯವಸ್ಥೆಯಾಗಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ವಿಷಯ (vii) ಮಂಡ್ಯನಗರದಲ್ಲಿ ಕುಡಿಯುವ ನೀರಿನ ಸರಬರಾಜಿನಲ್ಲಿ ಆಗಿರುವ ತೊಂದರೆ

ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ): ಮಾನ್ಯ ಅಧ್ಯಕ್ಷರೆ, ಮಂಡ್ಯ ನಗರದಲ್ಲಿ ಕುಡಿಯುವ ನೀರಿನಯೋಜನೆಗೆ ವಿದ್ಯುತಿನ ವೋಲ್ಟೇಜಿನ ವ್ಯತ್ಯಾಸದಿಂದ ಕಳೆದ 10 ರಿಂದ 15 ದಿವಸದವರೆಗೆ ನೀರಿನ ಸರಬರಾಜಿನಲ್ಲಿ ಬಹಳ ತೊಂದರೆ ಉಂಟಾಗಿತ್ತು. ಈಗಾಗಲೇ ಇದರ ಬಗ್ಗೆ ವಿದ್ಯುತ್ ರಾಜ್ಯ ಮಂತ್ರಿಯವರು ಸೂಕ್ತ ಕ್ರಮವನ್ನು ತೆಗೆದುಕೊಂಡಿದ್ದಾರೆ. ಆದರೆ ಈಗ ಇರತಕ್ಕಂಥ ವ್ಯವಸ್ಥೆ ಖಾಯಂ ಆಗಿ ಉಳಿಯಬೇಕಾದರೆ, ಹೂಟಗಳ್ಳಿ ವಿದ್ಯುತ್ ಸ್ಟೇಷನ್‌ನಿಂದ ವಿದ್ಯುತ್ ಸರಬರಾಜಾಗುತ್ತಿರುವ ಕಾರ್ಯ ಇದೇ ರೀತಿ ಮುಂದುವರಿಯಬೇಕೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ. ಹಾಗೆಯೇ ಮಾನ್ಯ ನಗರಾಭಿವೃದ್ಧಿ ಸಚಿವರು

ಇಲ್ಲಿಯೆ ಇರುವುದ್ದರಿಂದ, ಇವರ ಇಲಾಖೆಗೆ ಸಂಬಂಧಪಟ್ಟ ಒಂದು ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ. ನಮ್ಮಲ್ಲಿ ವಿದ್ಯುತ್ತಿನ ತೊಂದರೆಯಿಂದ ಕುಡಿಯುವ ನೀರಿನ ಸಮಸ್ಯೆ ತೀವ್ರವಾಗಿದ್ದು, ವಿದ್ಯುತ್ ತೊಂದರೆಯನ್ನು ನಿವಾರಣೆ ಮಾಡಿಸುವುದಕ್ಕೋಸ್ಕರ ಒಂದು ಜನರೇಟರ್ ಹಾಕಿಸತಕ್ಕಂಥ ವ್ಯವಸ್ಥೆಯನ್ನು ಮಾಡಿಸಬೇಕೆಂದು ಮಾನ್ಯ ನಗರಾಭಿವೃದ್ಧಿ ಸಚಿವರಲ್ಲಿ ತಮ್ಮ ಮುಖೇನ ಕೋರುತ್ತೇನೆ.

ಶ್ರೀ ಬಿ.ಬಿ. **ಚಿಮ್ಮನಕಟ್ಟಿ(ನಗರಾಭಿವೃದ್ಧಿ ಸಚಿವರು)**: ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿರತಕ್ಕಂಥದನ್ನು ಪರಿಶೀಲನೆ ಮಾಡುತ್ತೇನೆ.

ವಿಷಯ **(viii) ಮಂಗಳೂರು ನಗರಕ್ಕೆ ವಿದ್ಯುತ್ ಸರಬರಾಜಿನ ತೊಂದರೆಯಿಂದ ಉಂಟಾಗಿರುವ ಕುಡಿಯುವ ನೀರಿನ ಸಮಸ್ಯೆ**

ಶ್ರೀ ಎನ್. **ಯೋಗೀಶ್ ಭಟ್**: ಮಾನ್ಯ ಅಧ್ಯಕ್ಷರೇ, ರಾಜ್ಯದಲ್ಲಿರತಕ್ಕಂಥ ನೀರು ಸರಬರಾಜು ಪಂಪ್ ಸ್ಟೇಷನ್‌ಗಳಿಗೆ ವಿದ್ಯುತ್ ಸರಬರಾಜು ಸರಿಯಾಗಿ ಆಗುವಂತೆ ಎಲ್ಲ ರೀತಿಯ ಕ್ರಮ ತೆಗೆದುಕೊಳ್ಳಲಾಗುವುದೆಂದು ಸನ್ಮಾನ್ಯ ಮುಖ್ಯಮಂತ್ರಿಯವರು ಒಂದು ಹೇಳಿಕೆಯನ್ನು ಕೊಟ್ಟಿದ್ದಾರೆ. ಈಗ ಬಂದಿರತಕ್ಕಂಥ ಸಮಸ್ಯೆ ಏನೆಂದರೆ, ಮಂಗಳೂರು ನಗರಪಾಲಿಕೆಗೆ ಸಂಬಂಧಪಟ್ಟಂಥ ನೀರು ಸರಬರಾಜು ಪಂಪ್‌ಸ್ಟೇಷನ್‌ಗೆ ಇದು ಅನ್ವಯಿಸುವುದಿಲ್ಲವೆ? ಇಲ್ಲಿ ಇರತಕ್ಕಂಥ ಕೆಪಿಟಿಸಿಎಲ್ ಅಧಿಕಾರಿಗಳು ಇದನ್ನು ಮಾನ್ಯ ಮಾಡುತ್ತಿಲ್ಲವೆ? ಯಾವ ಕಾರಣಕ್ಕೋಸ್ಕರ ಇಂಥ ಸಮಸ್ಯೆ ಅಲ್ಲಿ ಉದ್ಭವವಾಗಿದೆ ಎಂಬುದನ್ನು ಮಾನ್ಯ ಮಂತ್ರಿಯವರು ಸ್ಪಷ್ಟಪಡಿಸಬೇಕು.

ಶ್ರೀ ಬಿ.ಬಿ. **ಚಿಮ್ಮನಕಟ್ಟಿ**: ಮಾನ್ಯ ಅಧ್ಯಕ್ಷರೆ, ಮಂಗಳೂರು ಮಹಾನಗರಪಾಲಿಕೆಯ ನೀರು ಸರಬರಾಜು ಪಂಪ್‌ಸ್ಟೇಷನ್‌ಗೆ ಸಂಬಂಧಪಟ್ಟಂತೆ ಪ್ರತ್ಯೇಕವಾದ ನೋಟೀಸ್ ಕೊಟ್ಟಿದ್ದರೆ, ಸರಿಯಾದಂಥ ಉತ್ತರವನ್ನು ಕೊಡಬಹುದಾಗಿತ್ತು.

ಶ್ರೀ ಎನ್. **ಯೋಗೀಶ್ ಭಟ್**: ಮಾನ್ಯ ಅಧ್ಯಕ್ಷರೆ, ಇದು ವಿದ್ಯುತ್ ಇಲಾಖೆಗೆ ಸಂಬಂಧಪಟ್ಟ ಪ್ರಶ್ನೆಯಾಗಿರುವುದರಿಂದ ವಿದ್ಯುತ್ ಇಲಾಖೆಯ ಸಚಿವರಲ್ಲಿ ಈ ಪ್ರಶ್ನೆಯನ್ನು ಕೇಳುತ್ತಿದ್ದೇನೆ. ನಮ್ಮಲ್ಲಿರತಕ್ಕಂಥ ತುಂಬೆ ಮತ್ತು ಲೆನ್‌ಸೆಂಟ್ ಡ್ಯಾಮ್ ಮತ್ತು ಮಂಗಳೂರಿನಲ್ಲಿರತಕ್ಕಂಥ ನೀರು ಸರಬರಾಜು ಪಂಪ್‌ಸೆಟ್‌ಗೆ ಆಳವಡಿಸಿರುವ ಟ್ರಾನ್ಸ್‌ಫಾರ್ಮರ್‌ಗಳು ಫೇಲ್ ಆಗಿದ್ದು ಮತ್ತು ಇಲ್ಲಿ ಇರತಕ್ಕಂಥ ಸ್ಟೆಬಿಲೈಜರ್‌ಗಳು ಕೂಡ ಫೇಲ್ ಆಗಿದೆ. ಇಲ್ಲಿ ಆಗಾಗ ವಿದ್ಯುತ್ ಸ್ಫೋಟಗಳು ಕೂಡ ಆಗುತ್ತಿದೆ. ಈ ರೀತಿಯಾದ ವಿದ್ಯುತ್ ವೈಫಲ್ಯದಿಂದ ಮತ್ತು ಷಟ್‌ಡೌನ್ ತೊಂದರೆಯಿಂದ ಅನೇಕ ಸಮಸ್ಯೆಗಳು ಉದ್ಭವವಾಗುತ್ತಿದೆ. ಬಹುಶಃ ಎರಡು ಗಂಟೆಗಳ ಕಾಲ ವಿದ್ಯುತ್ ಷಟ್‌ಡೌನ್ ಆದಂಥ ಸಂದರ್ಭದಲ್ಲಿ ಸುಮಾರು ಆರೆಂಟು ಗಂಟೆಗಳ ಕಾಲ ವಿದ್ಯುತ್ ಸರಬರಾಜು ಆಗುತ್ತಿಲ್ಲ. ಮಹಾನಗರ ಪಾಲಿಕೆ ಮತ್ತು ನಗರ ಪಾಲಿಕೆಯಲ್ಲಿರತಕ್ಕಂಥ ಹೆಚ್ಚಿನ ಬಾವಿಗಳಿಗೆ ಒಳಚರಂಡಿ ನೀರು ಸೇರಿ ಇವತ್ತಿನದಿವಸ ತುಂಬಾ ಹಾಳಾಗಿದೆ. ಮಹಾನಗರ ಪಾಲಿಕೆಯಿಂದ ಪ್ರತಿ ದಿವಸ 18 ಎಂ.ಜಿ.ಡಿ. ನೀರು ಸರಬರಾಜು ಆಗಬೇಕು. ಆದರೆ ವಿದ್ಯುತ್ ವೈಫಲ್ಯದಿಂದ ಇದು